5255(5143) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಡುಪಿ ಜಿಲ್ಲೆಯಲ್ಲಿ ಮಳೆಗಾಲದಲ್ಲಿ ನದಿದಂಡೆಗಳ ಕೊರೆತ ಉಂಟಾಗಿ ನದಿಯ ದಡದಲ್ಲಿ ವಾಸಿಸುವ ಜನರಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ನದಿದಂಡೆ ಕೊರೆತವನ್ನು ತಡೆಗಟ್ಟಲು ಕಳೆದ 3 ವರ್ಷಗಳಿಂದ ಎಷ್ಟು ಹಣ ಖರ್ಚು ಮಾಡಲಾಗಿದೆ;

(ವರ್ಷವಾರು ಮತ್ತು ವಿಧಾನ ಸಭಾವಾರು ವಿವರ ನೀಡುವುದು);

ಇ) ನದಿದಂಡೆಗಳ ಕೊರೆತಗಳ ಬಗ್ಗೆ ಸರ್ಕಾರ ಅಧ್ಯಯನ ಮಾಡಿದೆಯೇ; ಮಾಡಿದ್ದಲ್ಲಿ ವಿವರಗಳನ್ನು ವಿಧಾನಸಭಾವಾರು ನೀಡುವುದು;

ಈ) ಈ ವರ್ಷ ಗುರುತಿಸಲಾದ ನದಿ ದಂಡೆ ಕೊರೆತಗಳ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಬಂದಿದೆ.

ಆ) (ರೂ. ಲಕ್ಷಗಳಲ್ಲಿ)

ಕ್ರ. ಸಂ.	ವಿಧಾನ ಸಭಾ ಕ್ಷೇತ್ರ	2002-03	2003-04	2004-05
1	ಕಾಪು	10.53	5.72	2.15
2	ಬ್ರಹ್ಮಾವರ	14.97	0.89	0.28
3	ಕಾರ್ಕಳ	10.18	–	5.23
4	ಕುಂದಾಪುರ	14.33	1.98	17.71
5	ಬೈಂದೂರು	8.73	1.40	10.39
6	ಉಡುಪಿ	13.72	18.61	20.44
	ಒಟ್ಟು	**72.46**	**28.60**	**56.20**

ಇ) ಹೌದು

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಅನುದಾನದ ಲಭ್ಯತೆಯ ಆಧಾರದ ಮೇಲೆ ಕೈಗೆತ್ತಿಕೊಳ್ಳಲಾಗುವುದು.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಇವರ ಪ್ರಶ್ನೆ ಸಂಖ್ಯೆ 5143ಕ್ಕೆ

ಉಡುಪಿ ಜಿಲ್ಲೆಯಲ್ಲಿ ನದಿದಂಡೆ ಕೊರತ ಗುರುತಿಸಿರುವ ಪ್ರದೇಶಗಳು(ವಿಧಾನಸಭಾವಾರು)

ಉಡುಪಿ :

ಕೊಡವೂರು, ಕಲ್ಮಾಡಿ, ಉದ್ಯಾವರ, ಕಿದಿಯೂರು, ಉಳಿಯಾರಗೋಳಿ, ಕಡೆಕಾರು, ಕುತ್ಪಾಡಿ, ಪ್ರಿತ್ರೋಡಿ, ಕನ್ನರ್‌ಪಾಡಿ, ಬೈಲೂರು, ಕಪ್ಪೆಟ್ಟು, ಮರ್ಣೆ, ಪೆರ್ಣಂಕಿಲ, ಕೊಜಪಾಡಿ, ಅತ್ರಾಡಿ, ಕೆಮ್ಮೂರು.

ಬ್ರಹ್ಮಾವರ :

ಪಾವಂಜೆ, ಮುಗ್ಗೇರಿ, ಗಿಳಿಯಾರು, ಬನ್ನಾಡಿ, ಮಣೂರು, ಬೆಣ್ಣೆಕುದ್ರು, ಹೊಸಾಳ, ಐರೋಡಿ, ಕಲ್ಯಾಣಪುರ, ಪಡುತೋನ್ಸೆ, ಸಾಸ್ತಾನ, ಚಾಂತಾರು, ಆರೂರು, ಪಾಂಡೇಶ್ವರ, ನೀಲಾವರ, ಹನೆಹಳ್ಳಿ, ವಾರಂಬಳ್ಳಿ, ಉಪ್ಪೂರು, ಕೋಡಿ, ಸಾಲಿಗ್ರಾಮ, ಕರ್ಕಡ, ಪೆರ್ಡೂರು, ಕೊಕ್ಕರ್ಣೆ, ಚೇರ್ಕಾಡಿ.

ಬೈಂದೂರು :

ಕಟ್ಟೆಬೆಳ್ಳೂರು, ಹಕ್ಲಾಡಿ, ಗುಜ್ಜಾಡಿ, ಕಳಿಹಿತ್ಲು, ಕೊಲ್ಲೂರು, ಕರ್ಕಾಡಿ, ಕಬ್ಬ, ಕೊಡೇರಿ, ಗುಲ್ವಾಡಿ, ಹೆರಂಜಾಲು, ಕುಂಬದಕೋಣೆ, ಮಯಾಡಿ (ಬೈಂದೂರು), ಶಿರೂರು, ಕಾರ್ಗಲ್ಲು, ಮರವಂತೆ, ತೆಗ್ಗರ್ಸೆ, ಕಾಲ್ತೋಡು, ಉಪ್ಪಂದ, ಕೆಂಚನೂರು, ತ್ರಾಸಿ, ವ�ಂಡಿಸೆ, ಕುಂದಬಾರಂಬಡಿ, ಪಡುವರಿ, ಗಂಗೊಳ್ಳಿ, ಕೊರಾಡಿ, ಹಡವು, ಬಡಾಕೆರೆ, ಸೇನಾಪುರ, ಹೊಸಾಡು, ಉಪ್ಪನಕುದ್ರು, ನಾಡಾ, ಉಳ್ಳೂರು, ಹೆಮ್ಮಾಡಿ, ಹರ್ಕೂರು, ಹೆಮ್ಮುಂಜೆ (ಆಲೂರು) ಎಡ್ತೆರೆ, ಬಿಜೂರು, ಕೊಡ್ಲಾಡಿ, ಕಿರುಮುಂಜೇಶ್ವರ, ಗೋಳಿಹೊಳೆ.

ಕುಂದಾಪುರ :

ಬಸ್ರೂರು, ಬಾರ್ಕೂರು, ಅನಗಳ್ಳಿ ಹಲ್ನಾಡು, ಗೋಳಿಯಂಗಡಿ, ಕಾವ್ರಾಡಿ, ಕಂಡ್ಲೂರು, ತೆಕ್ಕಟ್ಟೆ, ಬೇಲೂರು, ಕಾಮತರಕುದ್ರು, ಹೇರಿಕುದ್ರು, ಮದ್ದುಗುಡ್ಡೆ, ಗಂಗೊಳ್ಳಿ, ಬೀಜಾಡಿ, ಕೋಟೇಶ್ವರ, ಕುಂಭಾಶಿ, ರಾಗಿಹಿತ್ಲು, ಎಡ್ಯಾಡಿ, ಮತ್ಯಾಡಿ, ಬೆಟ್ಟುಕುದ್ರು, ಹುಣ್ಸೆಮಕ್ಕಿ, ರಟ್ಟಾಡಿ, ಗೋಪಾಡಿ, ಸಿದ್ದಾಪುರ, ಜಪ್ತಿ, ಖಾರ್ವಿಕೇರಿ, ಹೇರೂರು, ಎಳಂತೂರು.

ಕಾರ್ಕಳ :

ಮಿಯಾರು, ರೆಂಜಾಳ, ಮಾಳ, ಶಿವಪುರ, ಅಂಡಾರು, ಹಿರ್ಗಾನ, ಕೆರ್ವಾಶೆ, ಕುಚ್ಚೂರು, ಇನ್ನಾ, ಕಾರ್ಕಳ, ಮುಂಡ್ಕೂರು, ಬೋಳ, ಚಾರ, ಕಡ್ತಲ, ಬೆಳ್ಮಣ್ಣು, ಮುದ್ರಾಡಿ, ಎರ್ಲತ್ತೂರು, ಬೆಳಂಜೆ, ಕುಕ್ಕುಂದೂರು, ನಲ್ಲೂರು, ಸೂಡಾ, ಈದು.

ಕಾಪು :

ಫಲಿಮಾರು, ಹೆಜಮಾಡಿ, ಪಡುಬಿದ್ರಿ ಉಳಿಯಾರಗೋಳಿ, ಕಟ್ಟಂಗೇರಿ, ಮೂಡಬೆಟ್ಟು, ಕಟ್ಟಾಡಿ, ಮುಂಡ್ಕೂರು, ಇನ್ನಾ, ಬೆಳಪು, ಎಳ್ಳೂರು .

5256(5144) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರತಿ ವರ್ಷ ಸಮುದ್ರ ಕೊರೆತ ಉಂಟಾಗಿ ಸಮುದ್ರ ತೀರದಲ್ಲಿ ವಾಸಿಸುವ ಮೀನುಗಾರರ ಹಾಗೂ ಇತರೆ ವರ್ಗದವರ ಮನೆ, ಆಸ್ತಿಪಾಸ್ತಿ ಮತ್ತು ಮೀನುಗಾರಿಕಾ ರಸ್ತೆಗಳಿಗೆ ಆಹಾರ ಹಾನಿ ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಪ್ರತಿ ವರ್ಷ ತುರ್ತು ಕಾಮಗಾರಿಗಳ ನೆಪದಲ್ಲಿ ಸರ್ಕಾರದ ಬೊಕ್ಕಸದಿಂದ ನೂರಾರು ಕೋಟಿ ವ್ಯಯ ಮಾಡುವುದಕ್ಕಿಂತ ಸಮುದ್ರ ಕೊರೆತ ತಡೆಗಟ್ಟಲು ಶಾಶ್ವತ ಯೋಜನೆಯನ್ನು ಸರ್ಕಾರ ರೂಪಿಸಲಾಗುವುದೇ;

ರೂಪಿಸಿದ್ದಲ್ಲಿ ಅನುಷ್ಟಾನಗೊಳಿಸುವುದು ಯಾವಾಗ ;